ಚಿಕ್ಕಬಳ್ಳಾಪುರ ಬಳಿ ದಲಿತ ಮಹಿಳೆಯ ಕೊಲೆ

[ವರದಿ : ಪಂಚಮ ಪ್ರತಿನಿಧಿಯಿಂದ]

ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ಬಾದಗಾನ ಹಳ್ಳಿಯಲ್ಲಿ ಕಳೆದ ಫೆಬ್ರುವರಿ 14ರಂದು ನರಸಮ್ಮ ಎಂಬ ದಲಿತ ಮಹಿಳೆಯ ಭೀಕರ ಕೊಲೆ ನಡೆದಿದೆ.

ನರಸಮ್ಮನ ಕುಟುಂಬದ ಜೀವನ ಕಾಡಿನಿಂದ ಕಟ್ಟಿಗೆ ತಂದು ಟೌನಿನಲ್ಲಿ (ಚಿಕ್ಕಬಳ್ಳಾಪುರದಲ್ಲಿ) ಮಾರಿ ಬದುಕುವುದು. ಅಂದು ನರಸಮ್ಮನ ಗಂಡನಿಗೆ ಮೈ ಸರಿಯಿಲ್ಲದ ಕಾರಣ ತಾನೇ ಚಿಕ್ಕಬಳ್ಳಾಪುರಕ್ಕೆ ಸೌದೆ ಮಾರಿ ಬರಲು ಹೋಗಿದ್ದಳು.

ನರಸಮ್ಮ ಸಾಯಂಕಾಲವಾದರೂ ಮನೆಗೆ ಬರದಿದ್ದರಿಂದ ಗಾಬರಿಯಿಂದ ಆಕೆಯ ಗಂಡ ಮತ್ತು ಮಾವ ಚಿಕ್ಕಬಳ್ಳಾಪುರ ಮತ್ತು ಸಂಬಂಧಿಗಳ ಊರುಗಳಲ್ಲಿ ಹುಡುಕಿ ಸಿಗದೆಯಿದ್ದರಿಂದ ಗಾಬರಿಯಾಗಿದ್ದರು.

ಈ ನಡುವೆ ನರಸಮ್ಮನನ್ನು ಒಲಿಸಿಕೊಳ್ಳಲು ಬಹಳ ದಿನಗಳಿಂದ ವಿಫಲನಾಗಿ ನಿರಾಶೆಗೊಂಡಿದ್ದ ಊರಿನ ಛೇರ್ಮನ್ನನ ಮಗ ಬೈರಪ್ಪ ಮತ್ತು ಆತನ ಸಂಗಡಿಗರು ಆಕೆ ಚಿಕ್ಕಬಳ್ಳಾಪುರದಿಂದ ಬರುವುದನ್ನೇ ನಿರೀಕ್ಷಿಸಿ ದಾರಿ ಕಾಯುತ್ತಿದ್ದರೆಂದು ಹೇಳಲಾಗಿದೆ. ಆಕೆ ಸಂಜೆ ಹೊತ್ತಿನಲ್ಲಿ ಸೌದೆ ವ್ಯಾಪಾರ ಮುಗಿಸಿ ತನ್ನ ಊರಿಗೆ ಹಿಂತಿರುಗುತ್ತಿದ್ದಾಗ ಬೈರಪ್ಪ ಮತ್ತು ಸಂಗಡಿಗರು ಆಕೆಯನ್ನು ಹಿಡಿದುಕೊಂಡು ಬಲಾತ್ಕಾರವಾಗಿ ಒಬ್ಬರಾದಂತೆ ಒಬ್ಬರು ಅಮಾನುಷ ಅತ್ಯಾಚಾರ ಎಸಗಿದರೆಂದು ಹೇಳಲಾಗುತ್ತಿದೆ.

ತಾವು ಎಸಗಿದ ಅಮಾನವೀಯ ಕೃತ್ಯ ಬಹಿರಂಗಗೊಳ್ಳಬಹುದೆಂದು ಆ ಕ್ರೂರ ಕಾಮಿಷ್ಟರು ಆಕೆಯ ಬಾಯಿಗೆ ಬಟ್ಟೆ ತುರುಕಿ ಕೊಲೆಮಾಡಿದ್ದಾರೆಂದು ಅಲ್ಲಿನ ಸುತ್ತಮುತ್ತಲಿನ ಜನರು ಮಾತನಾಡಿಕೊಳ್ಳುತ್ತಿದ್ದಾರೆ.

[ಕೊನೆಯ ಪುಟ ನೋಡಿ]

ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ ಸಾಮಾಜಿಕ, ಭೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ 5 ರೂ.ಗಳು

ಸಂಪುಟ : 3   ಸಂಚಿಕೆ : 6   5, ಮಾರ್ಚ್ 1979   ಪಾಕ್ಷಿಕ   ಬೆಲೆ : 20ಪೈಸೆ

ಶೋಷಿತರ ನೋವ ಮಿಡಿವ ಬಂಡಾಯ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನ ಈ ಬಾರಿ ಧರ್ಮಸ್ಥಳದಲ್ಲಿ ನಡೆಯಲಿದೆ. ಮೌಢ್ಯದ ನೀರು ನಿಂತು ನಾರುತ್ತಿರುವ ಜಾಗದಲ್ಲಿ ಈ ಬಾರಿ 'ಕನ್ನಡ ಸಾಹಿತಿಗಳು'ಗಳು ಸೇರಲಿದ್ದಾರೆ. ಜನರ ದಿನನಿತ್ಯದ ಬದುಕಿನ ಹೋರಾಟವನ್ನು ಮರೆತು ತಮ್ಮ ಸಾಹಿತ್ಯಾಲಾಪಗಳಲ್ಲಿ ಮಗ್ನರಾಗಲಿದ್ದಾರೆ.

ಆದರೆ ನಾಡಿನ ಜನತೆ ನಿರಾಶರಾಗಬೇಕಿಲ್ಲ. ಕಗ್ಗತ್ತಲ ಗರ್ಭದಿಂದ ಬೆಂಕಿಯ ಗೋಳವೊಂದು ಸಿಡಿದು ಬಂದಿದೆ. ಸಮಕಾಲೀನ ಬದುಕಿನಲ್ಲಿ ತಮ್ಮ ಜವಾಬ್ದಾರಿಯನ್ನು ಗುರುತಿಸಿಕೊಂಡಿರುವ ನಾಡಿನ ಬಂಡಾಯ ಸಾಹಿತಿಗಳು ಒಂದೆಡೆ ಸೇರಲಿದ್ದಾರೆ. ತಮ್ಮ ಕಾವ್ಯ ಎಲ್ಲ ದಬ್ಬಾಳಿಕೆಗಳ ವಿರುದ್ಧ ಹೋರಾಡುವ ಖಡ್ಗವಾಗಬೇಕು; ಜನರ ನೋವಿಗೆ ಮಿಡಿವ ಪ್ರಾಣ ಮಿತ್ರನಾಗಬೇಕು, ಎಂಬ ಘೋಷಣೆಯನ್ನು ಹಾಕಿದ್ದಾರೆ. ನಾಡಿನ ಬಹುಪಾಲು ದಲಿತ ಹಾಗೂ ಪ್ರಗತಿಪರ ಲೇಖಕರು ಒಂದೆಡೆ ಬೆಂಗಳೂರಿನಲ್ಲಿ ಸೇರಲಿರುವ ಈ ಸಮ್ಮೇಳನ ನಮ್ಮ ವಿಮೋಚನಾ ಹೋರಾಟದಲ್ಲಿಯ ಒಂದು ಮುಖ್ಯ ಘಟನೆ.

ದಲಿತ ಸಾಹಿತ್ಯಕ್ಕೆ ತನ್ನದೇ ಆದ ಪ್ರತ್ಯೇಕ ಲೋಕವಿದೆ. ಯಾರೂ ಕದಿಯಲಾಗದ ಶೈಲಿಯಿದೆ, ಬಂಧವಿದೆ. ದಲಿತರ ಹಾಡಿನ ಲಯ ಗದ್ಯದ ನಡಿಗೆ ಕಥನದ ರೀತಿ ಕುಣಿತದ ಗತ್ತು ಬೇರೆ ಯಾರಿಗೂ ಸಾಧ್ಯವಿಲ್ಲ. ದಲಿತ ತನದ ಮುದ್ರೆ ದಲಿತರ ಎಲ್ಲ ಕೃತಿಗಳ ಮೇಲಿರುತ್ತದೆ.

ದಲಿತರ ಈ ಸ್ವಂತಿಕೆ ಸೃಜನಶೀಲ ಸಾಹಿತ್ಯದಲ್ಲಿ ಮುಖ್ಯವಾದದ್ದು. ಆದರೆ ವೈಚಾರಿಕ ಮತ್ತು

[ಕೊನೆಯ ಪುಟ ನೋಡಿ]

ಕೋಲಾರ ದಲಿತ ಸಮ್ಮೇಳನ

ಕೋಲಾರ ಜಿಲ್ಲಾ ನಾಲ್ಕನೇ ದಲಿತ ಸಂಘಟನಾ ಸಮ್ಮೇಳನ ಕಳೆದ ತಿಂಗಳು 5ರಂದು ಕೋಲಾರದಲ್ಲಿ ನಡೆಯಿತು. ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಅನೇಕ ತಾಲ್ಲೂಕು ಘಟಕಗಳು ತಮ್ಮ ಬ್ಯಾನರ್ ಸಹಿತ ಪಾಲ್ಗೊಂಡಿದ್ದವು. ಸುಮಾರು ಮೂರು ಸಾವಿರ ದಲಿತರು ಸೇರಿದ್ದ ಈ ಸಮ್ಮೇಳನದಲ್ಲಿ ಹೆಚ್ಚಾಗಿ ಕೂಲಿಗಾರರು, ಭೂಹೀನರು ಪಾಲ್ಗೊಂಡಿದ್ದರು.

ಮೆರವಣಿಗೆಯಲ್ಲಿ ತಮ್ಮ ಎಲ್ಲಾ ನೋವುಗಳ ಆಕ್ರೋಶವನ್ನು ವ್ಯಕ್ತಪಡಿಸಿದರು. ಸಮ್ಮೇಳನದಲ್ಲಿ ರಾಜ್ಯದ ಇತರ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಹಾಜರಿದ್ದರು. ಕೊನೆಯಲ್ಲಿ ಶೋಷಣೆಯ ಮೂಲವನ್ನು ಬಿಡಿಸಿ ಹೇಳುವಂತಹ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಶೋಷಿತರ ಶೋಕ

ನಿವೃತ್ತಿ ಮತ್ತು ವೇತನದಲ್ಲಿ ಅನ್ಯಾಯ

ಮಾನ್ಯರೆ,

ನಾನು ಒಟ್ಟು 34 ವರ್ಷ ಸರ್ಕಾರಿ ಖಜಾನೆ ಇಲಾಖೆಯಲ್ಲಿ ನೌಕರನಾಗಿದ್ದೆ. ತಾರೀಖು 12-6-70 ರಂದು ನಾನು ನಿವೃತ್ತನಾದೆ. 34 ವರ್ಷಗಳ ಸೇವಾ ಅವಧಿಯ ಪ್ರಕಾರ Head Accountant ಆಗಿ ನಿವೃತ್ತನಾಗಬೇಕಾಗಿತ್ತು. K. C. S. R. ಪ್ರಕಾರ (Rule No. 60) ನ್ಯಾಯವಾಗಿ ನನ್ನ ನಿವೃತ್ತಿ ವೇತನವೂ ಹೆಚ್ಚಬೇಕು. ಆದರೆ ಸರ್ಕಾರಕ್ಕೆ ನಾನು 1970 ರಿಂದಲೂ ಈವರೆಗೂ ಮನವಿ ಸಲ್ಲಿಸಿರುತ್ತೇನೆ. ಆದರೂ ಕಾನೂನಿನ ಪ್ರಕಾರ ನನ್ನ ನಿವೃತ್ತಿ ವೇತನ ಹೆಚ್ಚಿಸಲಿಲ್ಲ.

ಹರಿಜನರು ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಅಭಿವೃದ್ಧಿಯಾಗಿ ಎಂಬ ಮಾತು ಕಳೆದ ಅನೇಕ ವರ್ಷಗಳಿಂದಲೂ ಕೇಳಿ ಬರುತ್ತಿದೆ. ಹರಿಜನನಾದ ನನ್ನ ವಿಷಯದಲ್ಲಿ ಇದುವರೆಗೂ ಅಂತಹ ಮಾತು ಕಾರ್ಯಗತವಾಗಿಲ್ಲ. ಇದು ನಿಜವಾಗಿಯೂ ಶೋಚನೀಯ.

ನನಗೆ ಆಗಿರುವ ಅನ್ಯಾಯದ ಬಗ್ಗೆ ನನ್ನ ನಿಲುವು ಇಷ್ಟೆ. ಈ ರೀತಿಯಲ್ಲಿ ಎಷ್ಟೇ ಕಾಡಿಬೇಡಿದರೂ ನನಗೆ ನ್ಯಾಯ ದೊರೆಯುವುದಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಈ ಮೂಲಕ ತಿಳಿಯಪಡಿಸುವುದೆಂದರೆ ನನಗೆ ಈಗಲಾದರೂ ನ್ಯಾಯ ದೊರಕದಿದ್ದರೆ ಸದ್ಯದಲ್ಲೇ ವಿಧಾನಸೌಧದ ಮುಂಭಾಗ ಅಮರಣಾಂತ ಮುಷ್ಕರ ನಡೆಸಲು ನಿರ್ಧರಿಸಿದ್ದೇನೆ.

—ಎ. ರಾಜಯ್ಯ
ಮೈಸೂರು

ದಲಿತ ನುಡಿ

ಆರ್ಥಿಕ ಮತ್ತು ಸಾಮಾಜಿಕ ಬಿಡುಗಡೆಗಾಗಿ ಮೊದಲು ಹೊಲೆಯ-ಮಾದಿಗ ಯುವಕರು ಸಂಘಟಿತರಾಗಬೇಕು. ನಂತರ ಹಿಂದುಳಿದ ಜಾತಿಗಳ ಯುವಕರನ್ನು. ಅದಾದ ನಂತರ ಮುಂದುವರಿದ ಜಾತಿಗಳಲ್ಲಿನ ಪ್ರಗತಿಪರ ಭಾವನೆಗಳ ಯುವಕರನ್ನು ಸೇರಿಸಿಕೊಳ್ಳಬೇಕು.

—ಭೋಯಿ ಭೀಮಣ್ಣ

ಪ್ರತಿಕ್ರಿಯೆ

ದಲಿತ ಸಂಘಟನೆ ಮತ್ತು ಎಡ ಪಕ್ಷಗಳು

ಮಾನ್ಯರೆ,

ಜನವರಿ 16 ರಿಂದ 21 ರವರೆಗೆ ತುಮಕೂರಿನಲ್ಲಿ ನಡೆದ ದ.ಸ.ಸ. ಕಾರ್ಯಕರ್ತರ ಶಿಬಿರದ ಬಗ್ಗೆ ಫೆಬ್ರುವರಿ 5ರ ಪಂಚಮದಲ್ಲಿ ಬಂದ ವರದಿಯಂತೆ "ಎಡ ಪಕ್ಷಗಳು ನಮ್ಮ ಗೆಳೆಯರು ಎಂಬ ತಿಳುವಳಿಕೆಯ ಬೆಳವಣಿಗೆ ಆಗಿದ್ದು ಈ ಶಿಬಿರದ ಇನ್ನೊಂದು ಪ್ರಯೋಜನ. ಈ ಶಿಬಿರದಲ್ಲಿ ನಮ್ಮ ಜತೆಗೂಡಿದ ಎಡಪಕ್ಷಗಳು ಮತ್ತು ಎಡ ಸಾಂಸ್ಕೃತಿಕ ತಂಡಗಳು ದಲಿತರಿಗೆ ಹೆಚ್ಚು ನಿಕಟವಾದವು. ದಲಿತ ಕಾರ್ಯಕರ್ತರು ಹೆಚ್ಚು ಹೆಚ್ಚು ಎಡ ಸಿದ್ಧಾಂತಗಳನ್ನು ಅಧ್ಯಯನ ಮಾಡಬೇಕು" ಎಂಬ ದೃಷ್ಟಿಗೆ ಹೆಚ್ಚು ಒತ್ತು ಬಿದ್ದು, ತರಬೇತಿ ಶಿಬಿರದ ಅನಿವಾರ್ಯತೆಯ ಇನ್ನೊಂದು ದೃಷ್ಟಿಯನ್ನು ಮರೆತಿರುವುದು ದುರಾದೃಷ್ಟಕರ.

ಎಡ ಪಕ್ಷಗಳು ನಮ್ಮ ಗೆಳೆಯರೆಂಬ ತಿಳುವಳಿಕೆ ದಲಿತ ಸಂಘರ್ಷ ಸಮಿತಿಗೆ ಈ ಶಿಬಿರ ನಡೆಯುವ ಮುಂಚೆಯೇ ಸ್ಪಷ್ಟವಾಗಿದೆ. ಈ ಶಿಬಿರದಲ್ಲಿ ಯಾವ ಎಡ ಪಕ್ಷಗಳೂ ನಮ್ಮ ಜತೆಗೂಡಲಿಲ್ಲ. ಬದಲಾಗಿ ಉಪನ್ಯಾಸಕ್ಕಾಗಿ ಕೆಲವು ಎಡ ಪಂಥೀಯರನ್ನು ಕರೆಸಲಾಗಿತ್ತು ಅಷ್ಟೆ.

ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ವಿಚಾರವಂತ ದಲಿತರು ಇಡೀ ದಲಿತ ಜನಾಂಗದ ವಿಮೋಚನೆಗಾಗಿ ಪ್ರಾಮಾಣಿಕ ಚರ್ಚೆ ನಡೆಸಿದರು. ಇಂಥ ಅಪರೂಪದ ತರಬೇತಿ ಶಿಬಿರ ಕರ್ನಾಟಕದಲ್ಲಿರುವ ಎಡ ಪಕ್ಷಗಳ ಕ್ರಾಂತಿ ನಿಷ್ಠೆಯನ್ನೇ ಪ್ರಶ್ನಿಸುವಂಥದ್ದಾಗಿತ್ತು.

ದಲಿತರ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ಪತ್ರಿಕಾ ಹೇಳಿಕೆಗಳಲ್ಲಿ, ಘೋಷಣೆ ಭಾಷಣಗಳಲ್ಲಿ ಕಳಕಳಿ ವ್ಯಕ್ತಪಡಿಸುವ ಎಡಪಕ್ಷಗಳು, ತಮ್ಮ ಜವಾಬ್ದಾರಿ ಅರಿತು ದಲಿತರನ್ನು ಸಂಘಟಿಸಿದ್ದರೆ ಬಹುಶಃ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟುತ್ತಿರಲಿಲ್ಲವೇನೋ!

ದಲಿತ ಸಂಘರ್ಷ ಸಮಿತಿಯ ಹುಟ್ಟೇ—ಎಡ ಪಕ್ಷಗಳು ದಲಿತರ ಬಗ್ಗೆ ನಿಜವಾದ ಕಳಕಳಿಹೊಂದದ ದುರಂತವನ್ನು ಸಾರಿ ಸಾರಿ ಹೇಳುತ್ತದೆ. 'ಶೂದ್ರ' ಪ್ರಜ್ಞೆಯ ಸೋಷಲಿಸ್ಟರು, "ಕಾರ್ಮಿಕ" ಪ್ರಜ್ಞೆಯ ಕಮ್ಯೂನಿಸ್ಟರು ದಲಿತರ ಬಗ್ಗೆ ಪ್ರಜ್ಞಾಶೂನ್ಯರಾದುದು ಈ ದೇಶದ ದುರಂತ. ಶೂದ್ರರಲ್ಲೇ ನಡೆಯುವ ಆಂತರಿಕ ಶೋಷಣೆಯನ್ನು ಅರ್ಥಮಾಡಿಕೊಳ್ಳದ ಸೋಷಲಿಸ್ಟರು, ಕಾರ್ಮಿಕರಲ್ಲಿಯೇ ಐತಿಹಾಸಿಕ ವರ್ಗಪ್ರಜ್ಞೆಯನ್ನು ಬೆಳೆಸಲು ಅಸಮರ್ಥರಾದ ಕಮ್ಯೂನಿಸ್ಟರು ದಲಿತ ಸಮಸ್ಯೆಯನ್ನು ಅದರ ಎಲ್ಲಾ ಮುಖಗಳೊಂದಿಗೆ ಅರ್ಥೈಸಿಕೊಳ್ಳುವುದು ಬಹಳೇ ದೂರದ ಮಾತಾಯಿತು.

ದಲಿತರ ಮೆದುಳನ್ನು ಬ್ರಾಹ್ಮಣರು ಹರಿದಂತೆ, ದಲಿತರ ಮೈಯನ್ನು ಶೂದ್ರರು ಹರಿಯುತ್ತಿದ್ದಾರೆಂಬುದನ್ನು ಸೋಷಲಿಸ್ಟರು ಗಮನಿಸಲಿಲ್ಲ. ಸಾಮಾಜಿಕ-ಆರ್ಥಿಕ-ರಾಜಕೀಯ-ಸಾಂಸ್ಕೃತಿಕ-ಈ ಎಲ್ಲಾ ದೃಷ್ಟಿಯಿಂದ ಸುಲಿಗೆಗೆ ತುತ್ತಾದ ದಲಿತರು ಕಮ್ಯೂನಿಸ್ಟರ ದೃಷ್ಟಿಯಲ್ಲಿ "ಪ್ರೊಲಿಟೇರಿಯಟ್" ಆಗಲೇ ಇಲ್ಲ.

'ಜಾತಿ' ಭೂತದಿಂದ ಸೋಷಲಿಸ್ಟರು, 'ವರ್ಗ' ಭೂತದಿಂದ ಕಮ್ಯೂನಿಸ್ಟರು ದಲಿತರನ್ನು ವಂಚಿಸಿದಾಗ ನಿಜ ಬದುಕಿನಲ್ಲಿದ್ದ ಶೋಷಣಾ ಖಡ್ಗದ ಜಾತಿ–ವರ್ಗ ಈ ಎರಡು ಅಲಗುಗಳಿಂದ ತತ್ತರಿಸಿ ಹೋಗುತ್ತಿದ್ದ ದಲಿತರು ಪ್ರತ್ಯೇಕವಾಗಿ ಚಿಂತಿಸಬೇಕಾಯಿತು.

ದಲಿತರ ಬಗ್ಗೆ ಎಡಪಕ್ಷಗಳ ಬೇಜವಾಬ್ದಾರಿ, ನಿಷ್ಕ್ರಿಯತೆ ದಲಿತರು ಪ್ರತ್ಯೇಕ ಸಂಘಟನೆ ಕಟ್ಟಿಕೊಳ್ಳುವಂತೆ ಮಾಡಿದವು ಎಂಬುದನ್ನು ದಲಿತರು ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು.

ಎಡಪಂಥೀಯರು ಕಾಳಜಿಯ ಉಪನ್ಯಾಸಗಳ ಮೂಲಕ ದಲಿತರಿಗೆ ನಿಕಟವಾಗಲು ಸಾಧ್ಯವಿಲ್ಲ. ಬದಲು ಕ್ರಿಯೆಯಲ್ಲಿಯೂ ಅವನ್ನು ಮಾಡಿ ತೋರಿಸಿದಾಗ ಮಾತ್ರ ನಿಜವಾದ ನಿಕಟತೆ ಸಾಧ್ಯ.

ದಲಿತರು ತಮ್ಮನ್ನು ಇಡಿಯಾಗಿ ಬೇರೆ ಎಡ ಪಕ್ಷಗಳಿಗೆ ಅರ್ಪಿಸಿಕೊಳ್ಳುವುದಕ್ಕಿಂತ, ಎಡ ಸಂಘಟನೆಯಾದ ದಲಿತ ಸಂಘರ್ಷ ಸಮಿತಿಗೆ ತಮ್ಮನ್ನು ಇಡಿಯಾಗಿ ಅರ್ಪಿಸಿಕೊಂಡು ಸಂಘರ್ಷ ಸಮಿತಿಯನ್ನು ಇನ್ನಷ್ಟು ಪ್ರಬಲವಾಗಿ ಬೆಳೆಸುವುದರತ್ತ ಗಮನ ಹರಿಸಬೇಕೆಂಬುದನ್ನು ಕರ್ನಾಟಕದ ಇತಿಹಾಸ ಕಲಿಸಿದ ಪಾಠವಾಗಿದೆ.

—ವಿಜಯ ಪಾಟೀಲ

ತಮಟೆ ಬಾರಿಸದ 'ಅಪರಾಧಕ್ಕೆ' ದಲಿತರ ಮೇಲೆ ಹಲ್ಲೆ

ಚನ್ನಪಟ್ಟಣ ತಾಲ್ಲೂಕಿನ ಕೊಂಡಾಪುರ ಗ್ರಾಮದ ದಲಿತರಿಗೆ ಕಳೆದ ಜನವರಿಯ ಸಂಕ್ರಾಂತಿ ಹಬ್ಬದ ದಿನ ಒಂದು ಕರಾಳದಿನ. ಅಲ್ಲಿ ಒಕ್ಕಲಿಗರದೇ ಮೇಲುಗೈ. 'ಬಹುತೇಕವಾಗಿ ಅವರೆಲ್ಲ ಭೂಮಾಲೀಕರು. ಸಂಕ್ರಾಂತಿ ದಿನ ದನಗಳನ್ನು ಕಿಚ್ಚಾಯಿಸುವ ಸಂದರ್ಭದಲ್ಲಿ ಹರಿಜನರು ಈ ಬಾರಿ ತಮಟೆ ಹೊಡೆಯಲಿಲ್ಲ. ಈ ಬೇಗುದಿಯಿಂದ ಕುಪಿತಗೊಂಡ ಭೂಮಾಲೀಕ ಒಕ್ಕಲಿಗರು ಹರಿಜನರ ಕರಿಯಯ್ಯನ ಮಗ ತೋಟಿ ಬೋರಯ್ಯ (55), ಎಂಬುವನ ಮೇಲೆ ಅಮಾನುಷ ದೌರ್ಜನ್ಯ ನಡೆಸಿದ್ದಾರೆ.

ಜೋಗಿಯಾಗಿರುವ ತೋಟಿ ಬೋರಯ್ಯ ಅಂದು ಮುಸ್ಸಂಜೆ ಸರೀಕರ ಮನೆಯಲ್ಲಿ ಪೂಜೆ ಮುಗಿಸಿ ತನ್ನ ಮನೆಯತ್ತ ಬರುತ್ತಿದ್ದ. ದಾರಿಯಲ್ಲಿ ಕಾದಿದ್ದ ಮರಿಗೌಡನ ಮಗ ಕರಿಗೌಡ ಮತ್ತು ಆತನ 18 ಜನ ಸಹಪಾಠಿಗಳು ಬೋರಯ್ಯನ ಕುತ್ತಿಗೆ ಪಟ್ಟಿ ಹಿಡಿದು ಎಕ್ಕತ್ತಿನ ಮೇಲೆ ಬಲವಾಗಿ ಗುದ್ದಿದರು. "ಕೆಟ್ನಲ್ಲಪ್ಪೋ...ಯಾಕ್ ಸಾಯಿಸ್ತಿರಪ್ಪ...... ನಂಗೆ ತಮಟೆ ಬಡಿಯಾಕ ಬರದಿಲ್ಲ" ಎಂದು ಗೋಳಿಟ್ಟರೂ ಗೊದಮಟ್ಟೆ (ತೆಂಗಿನ ಗರಿಯಿರುವ ಮಧ್ಯದ ದಿಂಡಿನ ಭಾಗ) ಯಿಂದ ಕರಿಗೌಡ ಮೈ ಚರ್ಮ ಸುಲಿಯುವಂತೆ ಹೊಡೆದಿದ್ದಾನೆ. ಜತೆಗೆ ಆತನ ಗೂಂಡಾ ಗುಂಪು ಆತನನ್ನು ಊರಿನ ಬೀದಿಯಲೆಲ್ಲ ಧರಧರನೆ ಎಳೆದುಕೊಂಡು ಹೋಗಿ ಲೈಟು ಕಂಬಕ್ಕೆ ಕಟ್ಟಿಹಾಕಿ ತಲಾಗೊಂದೊಂದು ಗೊದಮಟ್ಟೆಯಿಂದ ಮನಸಾರ ಬಡಿದು ತೀವ್ರವಾಗಿ ಗಾಯಗೊಳಿಸಿದ್ದಾರೆ. ಈ ಅಮಾನುಷ ದೌರ್ಜನ್ಯ ತಿಳಿದು ಹರಿಜನ ಕೇರಿಯ ಬೋರಯ್ಯ (28) ಎಂಬಾತ ಬಿಡಿಸಲು ಬಂದಾಗ ಆತನಿಗೂ ಹೊಡೆದಿದ್ದಾರೆ. ಇದನ್ನು ಕೇಳಿ ಕಿರುಚಿಕೊಂಡು ಓಡಿಬಂದ ಮಗ ಸಿದ್ಧರಾಜುವಿಗೂ (16), ಚೆನ್ನಾಗಿ ತಳಿಸಿದ್ದಾರೆ. ಈ ಘಟನೆ ಕಂಡು ಲಬೋ ಲಬೋ ಎಂದು ಬಾಯಿಬಡಿದುಕೊಂಡು ಓಡಿಬಂದು "ಬಿಟ್ಬುಬಿಡಿ" ಎಂದು ಕೇಳಿಕೊಂಡ ಬೋರಯ್ಯನ ನಾದಿನಿ ಗೌರಮ್ಮಳನ್ನು ಕೆಳಗೆ ಹಾಕಿ ತುಳಿದಿದ್ದಾರೆ.

ವರದಿ : ಎಲ್. ರಾಜಶೇಖರಯ್ಯ

ಇಷ್ಟೆಲ್ಲಾ ಅಮಾನವೀಯ ದೌರ್ಜನ್ಯ ನಮ್ಮ ಮೇಲೆ ನಡೆಯುತ್ತಿದ್ದರೂ ಯಾರೊಬ್ಬರೂ ಬಿಡಿಸದೆ ಪೆಚ್ಚಾಗಿ ನೋಡುತ್ತಲೇ ಇದ್ದರು ಎಂದು ಬೋರಯ್ಯ ಕಣ್ಣೀರಿಟ್ಟು ಹೇಳಿದ.

ರಕ್ಷಣೆ ಬದಲು ಬೈಗುಳ

ಬೋರಯ್ಯ ಮತ್ತು ಹೊಡೆತಕ್ಕೆ ಗುರಿಯಾದ ಎಲ್ಲರೂ ಊರಿಗೆ ಸಮೀಪದ ಹುಕ್ಕೂರು ಪೋಲೀಸ್ ಠಾಣೆಯತ್ತ ಓಡಿದರು. ಆಗಲೇ ಸುಮಾರು ರಾತ್ರಿ 10 ಗಂಟೆಯಾಗಿತ್ತು. ಸಬ್ ಇನ್ಸ್‌ಪೆಕ್ಟರ್ ಮುಂದೆ ಎಷ್ಟೇ ಗೋಳಾಟದಿಂದ ಕಷ್ಟ ನಿವೇದಿಸಿಕೊಂಡರೂ ರಕ್ಷಣೆ ನೀಡುವ ಮತ್ತು ದೌರ್ಜನ್ಯಕಾರರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಬೈದು ಕಳುಹಿಸಿದನಂತೆ.

ಈಗ ಈ ದಲಿತರಿಗೆ ಊರಿನ ಅಂಗಡಿಗಳಿಂದ ದವಸ ಧಾನ್ಯ ಮುಂತಾದ ಅಗತ್ಯ ವಸ್ತುಗಳನ್ನು ಕೊಡಕೂಡದೆಂದು ಕಟ್ಟಾಜ್ಞೆ ಮಾಡಿದ್ದಾರೆ. ಗುತ್ತಿಗೆ ಮಾಡುತ್ತಿದ್ದ ಇದ್ದ ಬದ್ದ ಅಷ್ಟಿಷ್ಟು ಜಮೀನನ್ನು ಬಲವಂತವಾಗಿ ಕಿತ್ತುಕೊಳ್ಳಲಾಗಿದೆ. ಕಿರುಕುಳ ಎಂದಿನಂತೆ ಮುಂದುವರಿದಿದೆ. ಇದರಿಂದ ಕಂಗೆಟ್ಟಿರುವ ದಲಿತರ ಗೋಳು ಅರಣ್ಯ ರೋದನವಾಗಿದೆ.

ಕೊಲೆ ಮಾಡ್ದೆ ಇದ್ರೆ ಬದುಕೇನು ?

ಇಷ್ಟಾದರೂ ಈ ದಲಿತರಿಗೆ ಇದುವರೆವಿಗೂ ಯಾವ ರಕ್ಷಣೆಯೂ ದೊರೆತಿಲ್ಲ. "ಅವರನ್ನ ಕೊಲೆ ಮಾಡ್ದೆ ಇದ್ರೆ ಬದುಕೇನು"? ಎನ್ನುವ ಭೂಮಾಲೀಕರ ಬಾಯಿ ನಿಂತಿಲ್ಲ.

ಈ ಘಟನೆ ನಡೆದು ಒಂದಮೂರೆ ತಿಂಗಳಾದರೂ ಅಲ್ಲಿನ ಪರಿಸ್ಥಿತಿ ಇನ್ನೂ ಹಸಿಹಸಿಯಾಗಿಯೇ ಹೊಗೆಯಾಡುತ್ತಿದೆ.

***

ದಲಿತ ವಿದ್ಯಾರ್ಥಿಗಳಿಂದ ಪ್ರತಿಭಟನಾ ಮೆರವಣಿಗೆ

ಹಿಂದುಳಿದ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳು ಈ ಮೊದಲು ಶಾಲಾ ಕಾಲೇಜುಗಳಿಗೆ ಕಟ್ಟಿರುವ ಶಿಕ್ಷಣ ಶುಲ್ಕವನ್ನು ವಾಪಸು ಅವರಿಗೇ ಹಿಂದಿರುಗಿಸಬೇಕೆಂದು ಸರ್ಕಾರ ಇತ್ತೀಚೆಗೆ ಆಜ್ಞೆ ಹೊರಡಿಸಿದೆ. ಈ ಆಜ್ಞೆಯ ಪ್ರಕಾರ ವಿದ್ಯಾರ್ಥಿಗಳ ಶಿಕ್ಷಣ ಶುಲ್ಕವನ್ನು ಸರ್ಕಾರವೇ ತುಂಬಲು ನಿರ್ಧರಿಸಿದೆ.

ಆದರೆ ಸಮಾಜ ಕಲ್ಯಾಣ ಇಲಾಖೆಯು ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಣ ಶುಲ್ಕವನ್ನು ಮಂಜೂರು ಮಾಡುತ್ತಿದ್ದು, ನಿಮ್ನ ಜಾತಿ ವಿದ್ಯಾರ್ಥಿಗಳಿಗೆ ಮಂಜೂರು ಮಾಡದೆ ಸರ್ಕಾರದ ಆಜ್ಞೆ ನಿಮಗೆ ಅನ್ವಯದಾಗುವುದಿಲ್ಲ ಎಂದು ಹೇಳುತ್ತಿದ್ದಾರೆ.

ಈ ಅನ್ಯಾಯವನ್ನು ಪ್ರತಿಭಟಿಸಿ ದಲಿತ ವಿದ್ಯಾರ್ಥಿಗಳು 1–3–79ರಂದು ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ತೆಗೆದಿದ್ದರು. ಶಿಕ್ಷಣ ಶುಲ್ಕವನ್ನು ಕೊಡದಿದ್ದರೆ ರಾಜ್ಯಾದ್ಯಂತ ಚಳವಳಿ ಹೂಡಲು ನಿರ್ಧರಿಸಿದ್ದಾರೆ.

ಬಾಪೂಜಿ ಹಾಸ್ಟೆಲ್ : ಕೊಳಕು ವ್ಯವಸ್ಥೆಯ ಆಗರ

ವರದಿ : ಗೋಪಾಲಕೃಷ್ಣ

ಬೆಂಗಳೂರು ಮಾಗಡಿರಸ್ತೆಯಲ್ಲಿರುವ ಬಾಪೂಜಿ ವಿದ್ಯಾರ್ಥಿ ನಿಲಯ ನೋಡಲು ಹೊರನೋಟಕ್ಕೆ ಪರವಾಗಿಲ್ಲ. ಆದರೆ ಒಳಹೊಕ್ಕಿದರೆ ಅದೊಂದು ಅನ್ಯಾಯದ ಉಗಮ ತಾಣ.

ಅಲ್ಲಿ ಸುಮಾರು 144 ದಲಿತ ವಿದ್ಯಾರ್ಥಿಗಳು ಇದ್ದಾರೆ. ಎಲ್ಲರೂ ಮಾಧ್ಯಮಿಕ ಮತ್ತು ಪ್ರೌಢ ಶಾಲೆಯವರು. ಸರ್ಕಾರ ಅವರಿಗೆ ತಿಂಗಳಿಗೆ ನೀಡುವ 40ರೂ.ಗಳಲ್ಲಿ ಸರಿಯಾದ ಅನ್ನ ನೀರು ಸಿಗುತ್ತಿಲ್ಲ. ಕುಡಿಯುವ ನೀರಿಗೆ ಬಂದಿರುವ ಬರ ಹೇಳತೀರದು. ಊಟಮುಗಿಸಿ ಬೀದಿ ನಲ್ಲಿಗಳತ್ತ ಕೈ ತೊಳೆಯಲು ಓಡಬೇಕು. ಒಂದೊಂದು ದಿನ ನೀರಿಲ್ಲದೆ ಅಡಿಗೆಮಾಡದೆ ಊಟಕ್ಕೆ ಸೊನ್ನೆ. ಆದಿಜಾಂಬವ ಅಭಿವೃದ್ಧಿ ಸಂಸ್ಥೆಯ ನೇತೃತ್ವದಲ್ಲಿ ನಡೆಯುತ್ತಿರುವ ಈ ವಿದ್ಯಾರ್ಥಿ ನಿಲಯದ ಆಡಳಿತ ವ್ಯವಸ್ಥೆ ತೀರಾ ಹದಗೆಟ್ಟಿದ್ದು ವಿದ್ಯಾರ್ಥಿಗಳ ಗೋಳು ಅರಣ್ಯ ರೋಧನವಾಗಿದೆ. ಸರ್ಕಾರದಿಂದ ಬರುವ ಬಟ್ಟೆ, ಪುಸ್ತಕ ಮತ್ತಿತರ ಸೌಲಭ್ಯಗಳನ್ನು ಆಡಳಿತವರ್ಗ ನುಂಗಿ ನೀರು ಕುಡಿಯುತ್ತಿದೆ.

ರೂಮುಗಳಿಗೆ ಸರಿಯಾಗಿ ವಿದ್ಯುತ್‌ಬಲ್ಪ್‌ಗಳಿಲ್ಲದೆ

[6ನೇ ಪುಟ ನೋಡಿ]

ಮುಜಾಫರ್‌ನಗರ : ದಲಿತರ ಮೇಲೆ ಗುಂಡಿ

ಆಗ್ರಾದಂತಹ ಹರಿಜನರ ಮೇಲಿನ ದುರ್ಘಟನೆ ಮತ್ತೆ ಉತ್ತರ ಪ್ರದೇಶದ ಮುಜಾಫರ್ ನಗರದಲ್ಲಿ ಕಳೆದ ಫೆಬ್ರವರಿ 12 ಮತ್ತು 13 ರಂದು ಸಂಭವಿಸಿದೆ. ಈ ಘಟನೆಯಲ್ಲಿ ಅಸಂಖ್ಯಾತ ಹರಿಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ಅವರ ಮನೆಗಳನ್ನು ಲೂಟಿಮಾಡಿ ನಾಶಪಡಿಸಲಾಗಿದೆ. ಆ ಸಂದರ್ಭದಲ್ಲಿ ಕೆಲವು ಮಹಿಳೆಯರು ಅಮಾನುಷ ಅತ್ಯಾಚಾರಕ್ಕೊಳಗಾದರು. ಕೆಲವು ಎಳೆ ಗೂಸುಗಳು ಹತ್ಯೆವಾದವು.

ಫೆಬ್ರವರಿ 12ರಂದು ರಬಿದಾಸ್ ದಿನಾಚರಣೆ. ಮುಜಾಫರ್ ನಗರದ ಹರಿಜನರು ಜಯಂತಿ ಆಚರಿಸಲು ಅಂದು ಮೆರವಣಿಗೆ ತೆಗೆದರು.

ಬಿ.ಎಲ್.ಡಿ. ನಾಯಕನ ಅಡ್ಡಿ

ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟಿತು. ಈಮಧ್ಯೆ ಸ್ಥಳೀಯ ಬಿ.ಎಲ್.ಡಿ ನಾಯಕನೊಬ್ಬ ತನ್ನ ಪುಂಡಶಕ್ತಿಗಳೊಡನೆ ಮೆರವಣಿಗೆ ನಡೆಯದಂತೆ ಅಡ್ಡಿಪಡಿಸಿದ. ಆದರೆ ಕುಪಿತಗೊಂಡ ಹರಿಜನರು ಮೆರವಣಿಗೆ ಮುಂದುವರಿಸುವುದಾಗಿ ಹಠಹಿಡಿದು ಹೊರಡಲು ಅನುವಾದರು. ಅಷ್ಟರಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ಆರಂಭವಾಯಿತು.

ಮೊದಲ ಸುತ್ತಿನ ಗುಂಡು

ಘರ್ಷಣೆಯ ಸಮಯದಲ್ಲಿ ಹರಿಜನರಿಗೆ ರಕ್ಷಣೆ ನೀಡುವ ಬದಲು ಪೊಲೀಸರು ಮೆರವಣಿಗೆಕಾರರ ಮೇಲೆ ಗುಂಡುಹಾರಿಸಿದರು. ಗುಂಡೇಟಿನಿಂದ ಅನೇಕ ಹರಿಜನರು ಗಾಯಗೊಂಡರು. ಈ ಘಟನೆಗೆ ಸಂಬಂಧಿಸಿದಂತೆ ಮತ್ತು ಪೊಲೀಸರ ಗೋಲಿಬಾರ್ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಹರಿಜನರು ದೂರು ನೀಡಿದರು. ಆದರೆ ಆ ಅಧಿಕಾರಿಗಳೂ ಸಹ ಹರಿಜನರಿಗೆ ನೆರವಾಗುವ ಬದಲು ದೌರ್ಜನ್ಯಕಾರರ ಸಂಗಡ ಸೇರಿಕೊಂಡರು.

ಎರಡನೇ ಸುತ್ತಿನ ಗುಂಡು

ತನ್ನ ವಿರುದ್ಧ ದೂರು ನೀಡಿದ್ದಕ್ಕಾಗಿ ಬಿ.ಎಲ್.ಡಿ ನಾಯಕ ಅಂದು ಸಂಜೆ ಹರಿಜನರ ಕೇರಿಯತ್ತ ಮರು ಸುತ್ತಿನ ದೌರ್ಜನ್ಯಕ್ಕೆ ತನ್ನ ಬೆಂಬಲಿಗರೊಡನೆ ಪೊಲೀಸರನ್ನು ಛೂ ಬಿಟ್ಟ. ಸ್ವಾಮಿನಿಷ್ಠೆ ಪಾಲಿಸಿ ಪೊಲೀಸರು ಮತ್ತೆ ಎರಡನೇ ಸುತ್ತಿನ ಗುಂಡಿನ ಮಳೆಗರೆದರು. ಬೆದರಿ ಹತಾಶರಾಗಿದ್ದ 30 ಮಂದಿ ಹರಿಜನರು ಕೂಡಲೇ ಕೇರಿಯಿಂದ ಕಾಲ್ಕಿತ್ತರು. ಕೈಗೆ ಸಿಕ್ಕಿದ 68 ಹರಿಜನರನ್ನು ಮನೆಗಳಿಂದ ಹೊರಗೆಳೆದು ಕ್ರೂರವಾಗಿ ಥಳಿಸಿದ ನಂತರ ಬಂದೀಖಾನೆಗೂ ತಳ್ಳಿದರು.

ಮತ್ತೆ ಮರುದಿನ

ಇಷ್ಟರಲ್ಲಿ ಹರಿಜನರು ಮತ್ತು ಸವರ್ಣೀಯರ ನಡುವಿನ ವಿರಸ ಮತ್ತಷ್ಟು ಬಿಗಡಾಯಿಸಿ ಮನಸ್ಸಿನಲ್ಲಿ ಕಾಡುತ್ತಿದ್ದ ಕಿಚ್ಚು ಬುಗಿಲೆದ್ದಿತು. ಮರುದಿನ ಅಂದರೆ ಫೆ13ರಂದು ಬೆಳಗ್ಗೆ ರೈದಾಸ್‌ಪುರ

○ ○ ○

ಕರ್ನಾಟಕ ದಲಿತ ಸಂಘರ್ಷ ಸಮಿತಿ

ಕರ್ನಾಟಕದಾದ್ಯಂತ ಸುಮಾರು ಮೂರು ವರ್ಷಗಳಿಂದ ದಲಿತ ಸಂಘಟನೆಯು ಸಕ್ರಿಯ ಕಾರ್ಯದಲ್ಲಿ ತೊಡಗಿರುವ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತನಾಗಬಯಸುವವರು ಈ ಕೆಳಕಂಡ ಕೆಲವು ನೀತಿ ಸಂಹಿತೆಗಳಿಗೆ ಒಳಪಡಬೇಕು.

ಸದಸ್ಯತ್ವದ ನಿಯಮಾವಳಿಗಳು

1) ಜಾತಿ ಮತ್ತು ವರ್ಗ ಹೋರಾಟದಲ್ಲಿ ನಂಬಿಕೆ ಇರುವ ಯಾವನೇ ದಲಿತ ದ.ಸ.ಸ. ಸದಸ್ಯನಾಗಲು ಅರ್ಹನಾಗಿರುತ್ತಾನೆ. ಇಂಥ ತತ್ವದಲ್ಲಿ ನಂಬಿಕೆಯಿರುವ ಆರ್ಥಿಕವಾಗಿ ಹಿಂದುಳಿದಿರುವ ದಲಿತೇತರನಿಗೂ ಸದಸ್ಯನಾಗುವ ಅರ್ಹತೆಯಿದೆಯಾದರೂ, ಅಂಥವರ ಬಗ್ಗೆ ಕೆಲವು ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು.

ಅ) ಆತ ಕನಿಷ್ಟಪಕ್ಷ ಒಂದುವರ್ಷ ಯಾವುದೇ ಸಂಘರ್ಷ ಸಮಿತಿಯ ಜೊತೆಗೆ ನಿಕಟವಾದ ಸಂಪರ್ಕವನ್ನಿಟ್ಟುಕೊಂಡು ಆ ಸಮಿತಿ ಮಾಡುವ ಸಂಘಟನೆಯಲ್ಲಿ ಪ್ರಾಮಾಣಿಕವಾಗಿ ದುಡಿದಿರಬೇಕು. ಅಂಥವರ ಸದಸ್ಯತ್ವವನ್ನು ಆಯಾ ಜಿಲ್ಲಾ/ವಲಯ ಸಂಚಾಲಕರ ಶಿಫಾರಸಿನ ಮೇಲೆ ಕೇಂದ್ರ ಸಮಿತಿ ಒಪ್ಪಿಗೆ ನೀಡುವುದು.

ಆ) ಮತ್ತು ಅಂಥವರ ಕೈಗೆ ದ.ಸ.ಸ. ಪದಾಧಿಕಾರವನ್ನು ಯಾವತ್ತೂ ಕೊಡಲಾಗದು. ದ.ಸ.ಸ ಕ್ರಾಂತಿಯ ನಾಯಕತ್ವ ಸಾಮಾಜಿಕವಾಗಿ- ಆರ್ಥಿಕವಾಗಿ ಹಿಂದುಳಿದ ದಲಿತರ ಕೈಯಲ್ಲೇ ಇರತಕ್ಕದ್ದು.

2) ದ.ಸ.ಸ. ಸದಸ್ಯ ಬೇರೆ ಯಾವುದೇ ರಾಜಕೀಯ ಪಕ್ಷದ ಹಾಗು ಸಾಮಾಜಿಕ ಸಂಘ ಸಂಸ್ಥೆಗಳ ಸದಸ್ಯನಾಗಿರಕೂಡದು. ಆದರೆ ಈಗಾಗಲೇ ಎಡ ಪಕ್ಷಗಳ ಸಂಘಟನೆಗಳಲ್ಲಿ ಸದಸ್ಯರಾಗಿರುವವರಿಗೆ ಈ ನಿಯಮ ಅನ್ವಯವಾಗುವುದಿಲ್ಲ.

3) ಸಮಿತಿಯ ಕಾಯಂ (ಕಾರ್ಡ್ ಹೋಲ್ಡರ್) ಸದಸ್ಯತ್ವವನ್ನು ಸಾಮಾನ್ಯ ಸದಸ್ಯತ್ವದ ಒಂದು ವರ್ಷದ ನಂತರ ಕಾರ್ಯಕರ್ತನ ನಿಷ್ಠೆ ಪ್ರಾಮಾಣಿಕತೆಯ ಆಧಾರದ ಮೇಲೆ ನೀಡಲಾಗುವುದು.

4) ಸಮಿತಿಯ ಸದಸ್ಯನೊಬ್ಬ ಯಾವುದೇ ರೀತಿಯ ಪತ್ರಿಕಾ ಹೇಳಿಕೆಯನ್ನು ನೀಡಲು ಲೆಟರ್ ಪ್ಯಾಡ್, ಸೀಲು ಮಾಡಿಸಿಕೊಳ್ಳಲು ಅರ್ಹನಲ್ಲ.

5) ವಲಯ, ಜಿಲ್ಲಾ, ತಾಲ್ಲೂಕು ಸಂಚಾಲಕರು ಪತ್ರಿಕಾ ಹೇಳಿಕೆ ನೀಡಲು ಅರ್ಹರಾಗಿರುತ್ತಾರೆ.

6) ಸದಸ್ಯತ್ವದ ಶುಲ್ಕ ಕನಿಷ್ಠ ಮಿತಿ ತಿಂಗಳಿಗೆ 25 ಪೈಸೆಗಳು.

7) ದ.ಸ.ಸ. ತತ್ವ ವಿರೋಧಿ ಕೆಲಸ ಮಾಡುವ ಯಾವನೇ ಸದಸ್ಯನನ್ನು ಮೂರು ನೋಟೀಸುಗಳ ನಂತರ ಸಂಘಟನೆಯಿಂದ ಹೊರಹಾಕಲಾಗುವುದು.

8) ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಭ್ರಷ್ಟಾಚಾರದ ಅಪ್ರಮಾಣಿಕತೆಯ ಆರೋಪಕ್ಕೆ ಒಳಗಾಗಿರುವ ವ್ಯಕ್ತಿಯು ದಲಿತನಾಗಿದ್ದರೂ ಸಮಿತಿಯ ಸದಸ್ಯನಾಗಲು ಅರ್ಹನಲ್ಲ.

9) ಯಾವನೇ ರಾಜಕಾರಣಿ/ಧಾರ್ಮಿಕ ಮುಖಂಡ/ಗುರು/ಮಂತ್ರಿ (ಇವರು ಯಾವಾಗಲೂ) ಇಂಥವರಿಗೆ ಸಭೆ ಸನ್ಮಾನಗಳನ್ನು ಮಾಡಿ ಹೂವಿನ ಹಾರ ಹಾಕುವುದನ್ನು ದ.ಸ.ಸ. ವಿರೋಧಿಸುತ್ತದೆ.

10) ದ.ಸ.ಸ. ನಡೆಸುವ ಹೋರಾಟವು ಜಯಪ್ರದವಾಗಲು ಧನ ಸಹಾಯ ನೀಡಿದರೆ ಅದನ್ನು ವಂತಿಗೆ ಎಂದು ಸ್ವೀಕರಿಸಿ ರಶೀದಿ ಕೊಡಬೇಕು.

ಸದಸ್ಯತ್ವದ ರಶೀತಿ ಈ

Counterfoil

ಸದಸ್ಯರ ಸಹಿ

ಕರ್ನಾಟಕ

ಶಾಖೆ

ನಂ.

ಶ್ರೀ

ತಾ

ಸುರಿಮಳೆ - ಅತ್ಯಾಚಾರ

ೂರಾರು" ಮಂದಿ ಹರಿಜನರ
ಾರರು, ತ್ಯಾಗಿಗಳು, ಜಾಟರು
ತ ಪೋಲಿಸರು ಸಾಮೂಹಿಕ
ರರು.

ೌರ್ಜನ್ಯದಲ್ಲಿ ಮೂವರು ಮಹಿ
ಂತೆ ಒಟ್ಟು 62 ಮಂದಿ ಹರಿ
ಗಿ ಗಾಯಗೊಂಡು, ಅನೇಕರು
ಯು ಕೈ ಕಾಲುಗಳನ್ನು ಕಳೆದು
ಸೇರಿದರು.

ಲಿಬಾರ್‌ನಿಂದ ಒಂದು ವರ್ಷದ
ಹಸುಳೆಯು ಗಾಯಗೊಂಡಿತು.
ರಲ್ಲಿ ಯುವಕರೇ ಹೆಚ್ಚು.

ುಂಡಿಗೆ ಬಲಿ

ಸಕ್ರಿಯವಾಗಿ ಪಾಲ್ಗೊಂಡಿದ್ದ
. ವಿದ್ಯಾರ್ಥಿ ಹರೀಶ್‌ಚಂದ್
ಗೆ ಬಲಿಯಾದ.

ಈ ಸಂದರ್ಭದಲ್ಲಿ ಹರಿಜನ ಸಂಸತ್ ಸದಸ್ಯರಾದ ಆರ್. ಎಲ್. ರಾಕೇಶ್, ಎಂ. ಎಲ್. ಪಿಪಿಲ್ ಮತ್ತು ಕುರೀಲ್ ಅವರು ಆಸ್ಪತ್ರೆಗೆ ಭೇಟಿ ಇತ್ತು ಗಾಯಗೊಂಡ ತಮ್ಮ ಬಾಂಧವರನ್ನು ಕಂಡ ನಂತರ ಘಟನೆ ನಡೆದ ಸ್ಥಳವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಕೊಲೆಗಡುಕರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಿ ಒತ್ತಾಯಪಡಿಸಿದ್ದಾರೆ.

ಕೇರಿ ಸ್ಮಶಾನ

ವರದಿ ಪ್ರಕಾರ: ನಾವು ಹರಿಜನರ ಕೇರಿಗೆ ಕಾಲಿಟ್ಟಾಗ ನೂರಾರು ಮನೆಗಳಿಗೆ ಬೀಗಜಡಿಯಲಾಗಿತ್ತು. ಬೀದಿಗಳು ಬಿಕೋ ಎನ್ನುತ್ತಿದ್ದವು. ಭೀತಿಗೊಂಡಿದ್ದ ಜನ ತಮ್ಮ ತಮ್ಮ ಜೋಪಡಿಗಳು ಮತ್ತು ಮನೆಗಳಲ್ಲಿ ಸೇರಿಕೊಂಡಿದ್ದರಿಂದ

[6ನೇ ಪುಟನೋಡಿ]

ಂ ಂ ಂ

ತ್ರಿ ಸಂಹಿತೆ

ಅಧಿಕಾರಿಗಳಿಂದ ವಂತಿಗೆ ಎಂದು
ರಿಸಬಹುದು. ಆದರೆ ಅದಕ್ಕಾಗಿ
ುರ್ರ್ಯಾದೆ ಎಂದು ಹೂವಿನ ಹಾರ

ಂಬಾಗದಲ್ಲಿ ಈ ಕೆಳ ಕಂಡ
ಚ್ಚು ಮಾಡಿಸಬೇಕು.

ತಿ ವಿರುದ್ಧದ ಹೋರಾಟದಲ್ಲಿ
ಶ್ವಾಸವಿದೆ.

ರಾಟದ ಗುರಿ ಸಮಗ್ರ ಬದಲಾ
ದರಿಂದ ಸುಧಾರಣಾವಾದಿ ಪಂಥ
ಕೀಯ ಪಕ್ಷಗಳಿಂದ ದೂರವಾಗಿ
ದ್ದು

ರುತ್ತೇನೆ.

3. ಜಾತಿ ನಾಶ ನನ್ನ ಉದ್ದೇಶವಾಗಿರುವುದರಿಂದ ಜಾತಿ/ಪಂಥ/ಉಪಜಾತಿ/ಧಾರ್ಮಿಕ ಆಚರಣೆ ಕಾರ್ಯಕ್ರಮಗಳಿಂದ ದೂರವಾಗಿರುತ್ತೇನೆ.

4. ದೇಶದ ಯಾವುದೇ ಮೂಲೆಯಲ್ಲಿ ದಲಿತರ ಮೇಲೆ ಹಲ್ಲೆ ನಡೆದಾಗ ಅದನ್ನು ಸಾಮೂಹಿಕವಾಗಿ/ಇಲ್ಲವೇ ವೈಯಕ್ತಿಕವಾಗಿ ಪ್ರತಿಭಟಿಸುತ್ತೇನೆ.

5. ಹಸಿವು ಮತ್ತು ಜಾತಿ ಮುಕ್ತ ಸಮಾಜ ನಿರ್ಮಾಣದ ವಿಮೋಚನಾ ಕಾರ್ಯದಲ್ಲಿ ತೊಡಗಿರುವ ದ.ಸ.ಸ. ತತ್ವಗಳಿಗೆ ನಾನು ಬದ್ಧನಾಗಿರುತ್ತೇನೆ.

ದ.ಸ.ಸ. ಈ ಕೆಳ ಕಂಡ ವಿಭಾಗಗಳಲ್ಲಿ ಸಂಘಟನೆ ಹೊಂದಿರುತ್ತದೆ

1) ದಲಿತ ವಿದ್ಯಾರ್ಥಿ ಸಮಿತಿ.
2) ದಲಿತ ಕಾರ್ಮಿಕ ಸಮಿತಿ.
3) ದಲಿತ ಕೃಷಿಕ ಸಮಿತಿ.
4) ದಲಿತ ಮಹಿಳಾ ಸಮಿತಿ.

ಈ ಎಲ್ಲ ಶಾಖೆಗಳೂ ದ.ಸ.ಸ. ಮಾರ್ಗದರ್ಶನದ ಅಡಿಯಲ್ಲಿ ಸಾಮಾನ್ಯ ತತ್ವಕ್ಕೆ ಹೊಂದಿಕೊಂಡು ಕೆಲಸ ಮಾಡುತ್ತವೆ.

ಬಿ. ಕೃಷ್ಣಪ್ಪ
ಸಂಚಾಲಕ
ಕರ್ನಾಟಕ ದಲಿತ ಸಂಘರ್ಷ ಸಮಿತಿ

ಂಘರ್ಷ ಸಮಿತಿ

....

ರಿಂದ .... ತಿಂಗಳಿನ
ಹಣ ಸಂದಾಯವಾಗಿರುತ್ತದೆ.

ಸಂಚಾಲಕರ ಸಹಿ

ಮನುಷ್ಯರ ಒಂದು ಪದ

ಉತ್ತಮರು ನಾವೇ ಸರ್ವೋತ್ತಮರು
ಅಂತ ಯಾಕಿಷ್ಟು ನಿಮಗೆ ದೌಲತ್ತು? ಅಂದರೆ
ಪಿತ್ತ ನೆತ್ತಿಗೇರಬಹುದಲ್ಲವೆ,
ರಕ್ತ ಕೊತಕೊತನೆ ಕುದಿಯಬಹುದಲ್ಲವೆ,
ಕಣ್ಣುಗಳು ಕೆಂಪಗಾಗಬಹುದಲ್ಲವೆ,
ಮೇಲಾಗಿ ನಿಮ್ಮ ಕೈಗಳಲ್ಲಿ
ಬಂದೂಕ ಬಂದು ಕೂರಬಹುದಲ್ಲವೆ,
ಆದರೂ ಚಿಂತಿಲ್ಲ ನಾವಂಗೇ ಹೇಳುತೇವೆ,
ಡಂಗೂರ ಹಾಕಿ ಸಾರುತ್ತೇವೆ.

ನಮ್ಮದೆಂಥ ಭವ್ಯ ಇತಿಹಾಸವೆಂದು
ಮೀಸೆ ತಿರುವಬೇಡಿರೋ ಮಹಾನುಭಾವರೆ
ನಾಚಿಕೆಯಾಗುತ್ತದೆ ನಮಗೆ.
ಈಗ: ಸ್ಪಷ್ಟ ಅರಿತಿದ್ದೇವೆ ಇತಿಹಾಸವನ್ನು;
ಅದರ ಪುಟಪುಟದಲ್ಲೂ ಕಂಡಿದ್ದೇವೆ
ನಿಮ್ಮ ಕ್ರೌರ್ಯದ ಹುಚ್ಚು ಹೊಳೆಯನ್ನ.
ಇಲ್ಲವೆಂದು ಅಲ್ಲಗಳೆಯುತ್ತೀರೋ
ಅಥ್ವಾ ಬೆಣ್ಣೆ ತಿಕ್ಕಲು ಬರುತ್ತೀರೋ
ನೋಡಿ, ಸಿದ್ಧರಿಲ್ಲ ನಾವು ಇದಕ್ಕೆ
ಮೇಲಾಗಿ ತಾಳ್ಮೆಯಿಲ್ಲ ನಮಗೆ
ಈವರೆಗಿನ ನಮ್ಮ ಸ್ಥಿತಿ
ಒಣಮರಕ್ಕೆ ಗಿಣಿಕಾದಂತೆ

ಕಣ್ಣಿದ್ದರೆ ನೋಡಿ ನಾಖಿನ್ನೂ ಕಗ್ಗತ್ತಲ ಜಗತ್ತಿನ
ತಳದಲ್ಲೇ ಕೊಳೆಯುತ್ತಿದ್ದೇವೆ
ಚೆಂದುಳ್ಳಿ ನಮ್ಮ ಅಕ್ಕ ತಂಗಿಯರೆಲ್ಲ ಎಷ್ಟು ಸಲೀಸಾಗಿ
ಸೂಳೆಯರಾಗುತ್ತಿದ್ದಾರೆ ಗೊತ್ತೆ.
ಅಷ್ಟೇಕೆ ಹಕ್ಕು ಕೇಳಿದ ನಮ್ಮ ಬಂಧು-ಬಾಂದವರೆಲ್ಲ
ಏಕದಂ ಸ್ವರ್ಗಕ್ಕೇ ಲಿಫ್ಟ್ ಆಗುತ್ತಿದ್ದಾರೆ.
ಇದೆಲ್ಲಾ ನಿಮ್ಮದೇ ಕೊಡುಗೆ ಸ್ವಾಮಿ
ನಿಮ್ಮ ಮನುಷ್ಯತ್ವದ ಪರಂಪರೆ.
ಇಂದು : ಇಡೀ ಹಗಲು
ನಿಮ್ಮ ಉಗುರು ಮಣ್ಣಾಗುವುದೇ ಇಲ್ಲ
ಆದರೂ ಉಣ್ಣುತ್ತೀರಿ, ಉಂಡು
ಧಿಮಾಕಿನಿಂದ ಮೆರೆಯುತ್ತೀರಿ
ನಮ್ಮ ನೋಡಿ ಗೇಲಿ ಮಾಡುತ್ತೀರಿ.
ನಾವೋ: ಗುಟುಕು ಜೀವ ಉಳಿಸಿಕೊಳ್ಳಲಾರದಷ್ಟು
ಹಸಿದಿದ್ದೇವೆ, ಇನ್ನೂ ಹಸಿಯುತ್ತಿದ್ದೇವೆ.
ಇನ್ನು ಮುಂದೆ ನಾವು
ನೀವು ಮಡಗಿದಂತೆ ಇರೋಕ್ಕಾಗಲ್ಲ
ಅದಕ್ಕೇ ಹೇಳುತ್ತಿದ್ದೇವೆ
ತುಂಬಾ ಸೌಜನ್ಯದಿಂದ ಬದಲಾಗಿ ಎಂದು
ಇಲ್ಲದಿದ್ದರೆ........

—ಹುಲ್ಲುಕೆರೆ ಮಹಾದೇವ

...ದಲಿತರ ಮೇಲೆ ಗುಂಡಿನ ಮಳೆ

[ಮಧ್ಯದ ಪುಟದಿಂದ]

ನಿಶ್ಶಬ್ದದ ಜೊತೆಗೆ ಭಯ ತಾಂಡವವಾಡುತ್ತಿದ್ದು, ಸ್ಮಶಾನದ ವಾತಾವರಣ ಉಂಟಾಗಿತ್ತು. ಆದರೂ ನಾವು ಕೆಲವು ಮನೆಗಳ ಬಾಗಿಲುಗಳನ್ನು ತಟ್ಟಿ ಭಯಗ್ರಸ್ತರಾಗಿದ್ದ ಸುಮಾರು 300 ಜನರನ್ನು ಕಲೆಹಾಕಿದೆವು. ಅತ್ಯಾಚಾರಕ್ಕೆ ಬಲಿಯಾಗಿದ್ದ ಕೆಲವು ಮಹಿಳೆಯರು ಅವಮಾನಿತರಾಗಿ ಕೇರಿಯಿಂದ ಕಾಣೆಯಾಗಿರುವುದಾಗಿ ದುಃಖತಪ್ತ ಜನರಿಂದ ತಿಳಿದು ಬಂತು. ಗುಂಪಿನೊಡನೆ ಸುಮಾರು ಲೂಟಿಯಾದ 18 ಮನೆಗಳನ್ನು ಒಳಹೊಕ್ಕಿ ಪರೀಕ್ಷಿಸಲಾಯಿತು. ಅವುಗಳೆಲ್ಲ ಸಂಪೂರ್ಣ ಜಖಂ ಆಗಿವೆಯಲ್ಲದೆ ಇದ್ದ ಅಷ್ಟಿಷ್ಟು ಆಹಾರ ಪದಾರ್ಥ ಮತ್ತಿತರ ಸಾಮಾನುಗಳನ್ನು ಲೂಟಿ ಮಾಡಲಾಗಿತ್ತು. ಮತ್ತು ಕೆಲವು ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಲೂಟಿ-ದಾಳಿಗೆ ತುತ್ತಾದ ಕೆಲವು ಮನೆಗಳ ವಾಸಿಗಳು ನಾಪತ್ತೆಯಾಗಿದ್ದಾರೆ. ಅವರು ಸತ್ತಿದ್ದಾರೆಯೋ ಅಪಹರಿಸಲ್ಪಟ್ಟಿದ್ದಾರೆಯೋ ಅಥವಾ ಜೀವಂತವಾಗಿದ್ದಾರೆಯೋ ಎಂಬುದೇ ಅಕ್ಕಪಕ್ಕದ ಜನರಿಗೂ ತಿಳಿಯದ ವಿಷಯವಾಗಿದೆ.

ಮಗು ಸತ್ತರೂ ತಾಯಿ ಮೇಲೆ ಅತ್ಯಾಚಾರ

ಹೊರಗಿನ ದೌರ್ಜನ್ಯಕ್ಕೆ ತತ್ತರಿಸಿ ತನ್ನ ಮಗುವಿನೊಡನೆ ಮನೆಯಲ್ಲಿ ಜೀವ ಹಿಡಿದು ಅವಿತಿದ್ದ ಮಹಿಳೆಯೊಬ್ಬಳನ್ನು ದುಷ್ಕರ್ಮಿಗಳು ಅತ್ಯಾಚಾರಕ್ಕೆ ಎಳೆದಾಡಿದರು. ಆಕೆಯ ಕಂಕುಳಲ್ಲಿದ್ದ ಮಗುವನ್ನು ಕಿತ್ತೆಸೆದಾಗ ಅದರ ತಲೆ ಪಕ್ಕದ ಗೋಡೆಗೆ ರಭಸದಿಂದ ತಗುಲಿದ ಕಾರಣ 'ಕಿರ್ರೊ' ಎಂದು ಕಿರುಚಿ ಅಸುನೀಗಿತು. ಮಗುವಿನ ಹತ್ಯೆಯಿಂದ ಹತಾಶಳಾದ ತಾಯಿ ಎಷ್ಟೇ ಅರ್ಭಟಿಸಿದರೂ ಕ್ರೂರಿಗಳ ಕಾಮಕ್ಕೆ ಬಲಿಯಾದ ಅಮಾನವೀಯ ದುರ್ಘಟನೆ ಬೆಳಕಿಗೆ ಬಂತು. ಕೆಲವು ಮನೆಗಳ ಲೂಟಿಗಾಗಿ ನುಗ್ಗಿದಾಗ ಕೈಗೆ ಸಿಕ್ಕಿದ ಮಹಿಳೆಯರನ್ನು ಬೆತ್ತಲೆಗೊಳಿಸಿ ಅತ್ಯಾಚಾರ ಎಸಗಿದುದು ತಿಳಿದು ಬಂತು.

ಪೊಲೀಸ್ ಇಲಾಖೆಯ ನೌಕರನೊಬ್ಬನ ಮನೆಗೆ ಕೆಲವು ಬಿ.ಎಲ್.ಡಿ. ನಾಯಕರು ನುಗ್ಗಿ ಆತನ ಪತ್ನಿ ಮೇಲೆ ಅತ್ಯಾಚಾರ ಎಸಗಿದರು. ಅದೇ ಪಕ್ಕದ ಕಿರು ಮನೆಗಳಲ್ಲಿದ್ದ ಮತ್ತಿಬ್ಬರು ಮಹಿಳೆಯರನ್ನು ಏಳೆಂಟು ಮಂದಿ ಕ್ರೂರ ಪೊಲೀಸರು ಅತ್ಯಾಚಾರ ಎಸಗಿದ ಘಟನೆಗಳು ನಮ್ಮ ಗಮನಕ್ಕೆ ಬಂದವು.

ಎರಡು ದಿನದ ಈ ಅಮಾನುಷ ಘಟನೆಯಲ್ಲಿ ಒಟ್ಟು ಆರು ಮಕ್ಕಳು ಸತ್ತಿದ್ದು, ಎಂಟು ಮಂದಿ ಮಹಿಳೆಯರು ಅತ್ಯಾಚಾರಕ್ಕೆ ಬಲಿಯಾಗಿದ್ದಾರೆ ಎಂದು ಸಂಸತ್ ಸದಸ್ಯರು ತಮ್ಮ ವರದಿಯಲ್ಲಿ ವಿವರಿಸಿದ್ದಾರೆ.

[ಸೌಜನ್ಯ : **ನ್ಯಾಷನಲ್ ಹೆರಾಲ್ಡ್**]

> ಪ್ರಿಯ ಓದುಗರೆ,
>
> ಕೆಲವು ಅನಿವಾರ್ಯ ಕಾರಣಗಳಿಂದ ಬೆಂಗಳೂರಿಗೆ ಬಂದ ಪಂಚಮ ಕಳೆದ ಏಳು ತಿಂಗಳಿಂದಲೂ ಪ್ರಕಟವಾಗುತ್ತಿದೆ. ಆದರೆ ಈವರೆಗೆ ಅಂಚೆ ವಿನಾಯಿತಿ ದೊರೆತಿರಲಿಲ್ಲ. ಆದರೂ ನಮ್ಮ ಓದುಗರಿಗೆ ಮತ್ತು ಚಂದಾದಾರರಿಗೆ ಪತ್ರಿಕೆ ತಲುಪಿಸಲು ಅನೇಕ ಮೂಲಗಳಿಂದ ಯತ್ನಿಸಿದ್ದೇವೆ. ಇಷ್ಟಾದರೂ ಕೆಲವರಿಗೆ ತಲುಪಿಲ್ಲ. ಅದಕ್ಕಾಗಿ ವಿಷಾದಿಸುತ್ತೇವೆ. ಇನ್ನು ಮುಂದೆ ನಿಯಮಿತಕಾಲಕ್ಕೆ ಪತ್ರಿಕೆ ತಮ್ಮ ಕೈ ಸೇರುತ್ತದೆ ಎಂಬ ಭರವಸೆ ಕೊಡುತ್ತೇವೆ. ಅಂತೆಯೇ ಹಿಂದಿನ ವರ್ಷಗಳ ಚಂದಾ ಹಣ ಕೊಡಬೇಕಾದವರು ಕೂಡಲೇ ಚಂದಾ ಕಳುಹಿಸಿ ಸಹಕರಿಸಿ. ಇಲ್ಲದಿದ್ದಲ್ಲಿ ತಮಗೆ ಪತ್ರಿಕೆ ಕಳುಹಿಸಲು ಕಷ್ಟವಾಗುತ್ತದೆ.
>
> —ಸಂಪಾದಕ

ಪಹಣಿ ತಿದ್ದಿ ಹರಿಜನರಿಗೆ ಮೋಸ

ಮೂರುವರೆ ಎಕರೆ ಜಮೀನಿಗೆ ಸಂಬಂಧಿಸಿದ ಪಹಣಿ ನಕಲುಗಳನ್ನು ತಿದ್ದಿ ಹರಿಹರ ತಾಲ್ಲೂಕಿನ ಮಹಾಜೇನ ಹಳ್ಳಿಯ ಸುಮಾರು 30 ಮಂದಿ ಹರಿಜನ-ಗಿರಿಜನರಿಗೆ ಅನ್ಯಾಯವೆಸಗಲಾಗಿದೆ. 1979-70ರಲ್ಲಿ 30ಮಂದಿ ಹರಿಜನ-ಗಿರಿಜನರ ಹೆಸರಿದ್ದ ಆ ಪಹಣಿಯಲ್ಲಿ ಈಗ ಬೇರೊಬ್ಬ ಜಮೀನ್ದಾರರ ಹೆಸರಿದೆ.

ಮಹಾಜೇನ ಹಳ್ಳಿಯ ಸರ್ವೆ ನಂ. 117ರಲ್ಲಿ ಹರಿಜನ-ಗಿರಿಜನರು ಸುಮಾರು 80ವರ್ಷಗಳಿಂದ ತರಕಾರಿ ಬೆಳೆದು ಜೀವನ ನಡೆಸುತ್ತಿದ್ದರು. ತಾವು ಬೇಸಾಯ ಮಾಡುತ್ತಿರುವ ಜಮೀನಿಗೆ ಪಹಣಿ ಬರೆಸುವಂತೆ 1960ರಲ್ಲಿ ಕೆಲವರು ಇವರಿಗೆ ತಿಳುವಳಿಕೆ ನೀಡಿದ ನಂತರ 1979ರಲ್ಲಿ ತಮ್ಮ ಹೆಸರಿಗೆ ಪಹಣಿ ಬರೆಸಿಕೊಂಡರು. ಆದರೆ ಪಹಣಿ ಬರೆಸಿಕೊಂಡು ಜಮೀನು ತಮ್ಮದನ್ನಾಗಿಸಿಕೊಂಡವೆಂಬ ಹರ್ಷ ಇವರಿಗೆ ಹೆಚ್ಚು ದಿನ ಉಳಿಯಲಿಲ್ಲ. ಈಗ ಪಹಣಿಯಲ್ಲಿ ಬೇರೊಬ್ಬ ಜಮೀನ್ದಾರರ ಹೆಸರು ಇರುವುದು ತಿಳಿದು ಬಂದಿರುವುದರಿಂದ ಈ ಹರಿಜನರು ಕಂಗಾಲಾಗಿದ್ದಾರೆ.

[ಸೌಜನ್ಯ : **ಪ್ರಜಾವಾಣಿ**]

ಬಾಪೂಜಿ ಹಾಸ್ಟೆಲ್ : ಕೊಳಕು ವ್ಯವಸ್ಥೆಯ ಆಗರ

[3ನೇ ಪುಟದಿಂದ]

ಕಗ್ಗತ್ತಲು ಆವರಿಸಿದೆ. ಕೆಲವು ರೂಮುಗಳಲ್ಲಿ ದೀಪ ಉರಿಸಲಾಗುತ್ತಿದೆ. ಶೌಚಗೃಹವಾಗಲಿ, ಸ್ನಾನಗೃಹವಾಗಲಿ ಕೊಳೆತು ನಾರುತ್ತಿವೆ. ಇನ್ನು ಊಟದ ಸ್ಥಿತಿಯಂತೂ ಹೇಳತೀರದು. ಈ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವ ವಿದ್ಯಾರ್ಥಿಗಳ ಸೂಕ್ತ ಸೌಲಭ್ಯ ಒದಗಿಸಿಕೊಡಿರೆಂದು ಕೇಳಿದರೆ ಆಡಳಿತವರ್ಗ ಟಿ.ಸಿ. ಕೊಟ್ಟು ಮನೆಗೆ ಕಳುಹಿಸುವುದಾಗಿ ಬೆದರಿಕೆ ಹಾಕುತ್ತಿದೆ.

ಪ್ರತಿಭಟನಾ ಮೆರವಣಿಗೆ

ಈ ಎಲ್ಲಾ ಅನ್ಯಾಯಗಳ ವಿರುದ್ಧ ಕಳೆದ ತಿಂಗಳು 18ರಂದು ವಿದ್ಯಾರ್ಥಿಗಳು ಬಂಡೆದ್ದು ಎಸ್.ಎಫ್.ಐ. ಮತ್ತು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ನೇತೃತ್ವದಲ್ಲಿ ನಗರದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಈ ಸಂದರ್ಭದಲ್ಲಿ ಸಮಾಜಕಲ್ಯಾಣ ನಿರ್ದೇಶಕರು ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ಇತ್ತಿದ್ದಾರೆಯೇ ಹೊರತು ಇನ್ನೂ ತುರ್ತಾಗಿ ಕ್ರಮ ಕೈಗೊಂಡಿಲ್ಲ. ಆದ್ದರಿಂದ ವಿದ್ಯಾರ್ಥಿಗಳ ಸಹನೆ ದಿನೇದಿನೇ ಮೀರುತ್ತಿದ್ದು ಮತ್ತ ತೀವ್ರತರ ಚಳುವಳಿಗೆ ಸನ್ನದ್ಧರಾಗಿದ್ದಾರೆ.

ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲೂ ಇಂತಹದೇ ಒಂದಲ್ಲಾ ಒಂದುರೀತಿಯಲ್ಲಿ ರಾಜಕೀಯ ಪ್ರೇರಿತವಾಗಿರುವ ದಲಿತರ ಒಂದು ಮಧ್ಯಮ ವರ್ಗದಿಂದ ಅನ್ಯಾಯಗಳು ನಡೆಯುತ್ತಿವೆ. ಈ ಅನ್ಯಾಯಗಳಿಗೆ ಕೊನೆ ಎಂದು ?

ದಲಿತ ಅಭ್ಯರ್ಥಿಗಳ ಬಗ್ಗೆ ಬೆಂಗಳೂರು ವಿ.ವಿ. ಅಸ್ಪೃಶ್ಯತೆ

ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ವಿವಿಧ ಇಲಾಖೆಗಳಿಗೆ ಸಂಶೋಧನಾ ಸಹಾಯಕ ಹುದ್ದೆಗಳಿಗೆ ಅರ್ಜಿ ಕರೆದಿತ್ತು. ಅನುಭವವುಳ್ಳ ಮತ್ತು ಪರಿಶಿಷ್ಟವರ್ಗ ಹಾಗೂ ಪರಿಶಿಷ್ಟ ಬುಡಕಟ್ಟು ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದೆಂದು ಸೂಚಿಸಲಾಗಿತ್ತು. ಆದರೆ ವಿಶ್ವವಿದ್ಯಾನಿಲಯ ತನ್ನ ಜಾಹೀರಾತಿನ ಸೂಚನೆಗಳಿಗ ತದ್ವಿರುದ್ಧವಾಗಿ ನಡೆದುಕೊಂಡಿದೆ.

ಯಾವ ಸಂಶೋಧನಾ ಅನುಭವವಿಲ್ಲದ ಸವರ್ಣೀಯ ಅಭ್ಯರ್ಥಿಗಳನ್ನು ರಾಜ್ಯಶಾಸ್ತ್ರ, ಸಂಸ್ಕೃತ ಮತ್ತು ಸಮಾಜಶಾಸ್ತ್ರ ವಿಭಾಗಗಳಿಗೆ ಆಯ್ಕೆ ಮಾಡಲಾಗಿದೆ. ಆದರೆ ಸಂಶೋಧನಾ ಅನುಭವ ವಿಲ್ಲವೆಂದು ದಲಿತ ಜನಾಂಗದ ಶಾಂತಾ ಎಂಬ ಅಭ್ಯರ್ಥಿಯನ್ನು ಮತ್ತು ಎರಡು ವರ್ಷ ಸಂಶೋಧನಾ ಅನುಭವವಿರುವ ಸ್ವತಂತ್ರಮ್ಮ ಎಂಬುವವರನ್ನು ತತ್ವಶಾಸ್ತ್ರ ವಿಭಾಗದಲ್ಲಿ ಮತ್ತೆ ಮರುನೇಮಕ ಮಾಡಿಕೊಂಡಿಲ್ಲ.

ತನ್ನ ಸೂಚನೆಗಳಿಗೆ ತಾನೇ ವಿರುದ್ಧವಾಗಿ ನಡೆದುಕೊಂಡಿರುವ ವಿಶ್ವವಿದ್ಯಾನಿಲಯ ದಲಿತ ಅಭ್ಯರ್ಥಿಗಳ ಬಗ್ಗೆ 'ಅಸ್ಪೃಶ್ಯತೆ' ಆಚರಿಸಲು ಹೊರಟಂತಿದೆ. ಇಂತಹ ಅನ್ಯಾಯಗಳನ್ನು ಬಹಳ ವರ್ಷಗಳಿಂದ ಎಡಬಿಡದೆ ಮುಂದುವರಿಸಿಕೊಂಡು ಬರುತ್ತಿರುವುದನ್ನು ಇನ್ನಾದರೂ ನಿಲ್ಲಿಸಲಿ. ಮತ್ತು ದಲಿತ ಅಭ್ಯರ್ಥಿಗಳಿಗೆ ಈಗ ಆಗಿರುವ ಇಂತಹ ಅನ್ಯಾಯಗಳ ಬಗ್ಗೆ ವಿಚಾರಣೆ ಆಗಲಿ.

ಬಾಗೇಪಲ್ಲಿ : ವಿದ್ಯಾರ್ಥಿಗಳ ಮೇಲೆ ನಿಲಯಪಾಲಕರ ಹಲ್ಲೆ

ವರದಿ : 'ಸಿಂಫನ'

ಕೋಲಾರ ಜಿಲ್ಲೆ ಬಾಗೇಪಲ್ಲಿಯ ನಿಮ್ನವರ್ಗದ ವಿದ್ಯಾರ್ಥಿನಿಲಯದ ನಿಲಯ ಪಾಲಕ ಲಕ್ಷ್ಮಿನಾರಾಯಣರ ದೌರ್ಜನ್ಯದ ಅಟ್ಟಹಾಸ ಅತಿರೇಕಕ್ಕೆ ಹೋಗಿದೆ. ಇತ್ತೀಚೆಗೆ ವಿದ್ಯಾರ್ಥಿಯೊಬ್ಬನ ಮೇಲೆ ಅವರು ನಡೆಸಿದ ಅಮಾನವೀಯ ಹಲ್ಲೆ ಅದಕ್ಕೆ ಸಾಕ್ಷಿ.

ಜಿ. ನರಸಿಂಹಪ್ಪ ಎಂಬ ಏಳನೇ ತರಗತಿ ವಿದ್ಯಾರ್ಥಿ ಇತ್ತೀಚೆಗೆ ಖಾಯಿಲೆಯಿಂದ ನರಳುತ್ತಿದ್ದ ತನ್ನ ತಂದೆಯನ್ನು ನೋಡುವ ಸಲುವಾಗಿ ಒಂದು ವಾರ ಗೈರು ಹಾಜರಾದದ್ದಕ್ಕಾಗಿ ನಿಲಯಪಾಲಕರು ಆತನಿಗೆ ಕಬ್ಬಿಣದ ಸಲಾಕಿಯಿಂದ ಚೆನ್ನಾಗಿ ಹೊಡೆದು ಗಾಯಗೊಳಿಸಿದ್ದಾರೆ. ತೀವ್ರವಾಗಿ ಗಾಯಗೊಂಡ ವಿದ್ಯಾರ್ಥಿಯು ಕೊನೆಗೆ ಆಸ್ಪತ್ರೆ ಸೇರಬೇಕಾಯಿತು.

ಇಷ್ಟೇ ಅಲ್ಲದೆ ವಿದ್ಯಾರ್ಥಿಗಳಿಂದ ಪಡೆದಿದ್ದ ಠೇವಣಿ ಹಣದಲ್ಲಿ 10 ರೂ.ಗಳನ್ನು ವಾಪಸು ಕೊಟ್ಟು ಅದರಲ್ಲಿ ಪ್ರತಿ ವಿದ್ಯಾರ್ಥಿಯಿಂದ 8 ರೂ.ಗಳನ್ನು ಬೇತಮಂಗಲದ ರಂಗಸ್ವಾಮಿ ದೇವಸ್ಥಾನ ಕಟ್ಟಲಿಕ್ಕೆಂದು ಸುಲಿಗೆ ಮಾಡಿದ್ದಾರೆ.

ವಿದ್ಯಾರ್ಥಿ ನಿಲಯದಲ್ಲಿ ಊಟ ಮತ್ತಿತರ ಸೌಲಭ್ಯ ಒದಗಿಸುವ ಬದಲು ಸೌದೆ ಹೊಡೆಸುವುದು, ನೀರು ಹೊರಿಸುವುದು ಮುಂತಾದ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದು ಅವರ ವ್ಯಾಸಂಗಕ್ಕೆ ಅಡ್ಡಿಯುಂಟುಮಾಡುತ್ತಿದ್ದಾರೆ. ಹಿಂದೊಮ್ಮೆ ಭ್ರಷ್ಟಾಚಾರದಿಂದ ಸಸ್ಪೆಂಡ್ ಆಗಿದ್ದ ಲಕ್ಷ್ಮಿನಾರಾಯಣರು ಈಗಲೂ ವಿದ್ಯಾರ್ಥಿನಿಲಯದಿಂದ ಹೊರಕ್ಕೆ ದವಸ ಧಾನ್ಯಗಳನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಮತ್ತಿತರ ರೀತಿಯಲ್ಲಿ ತಮ್ಮ ಕಿರುಕುಳವನ್ನು ಮುಂದುವರೆಸಿದ್ದಾರೆ.

ಈ ಸಂಬಂಧದಲ್ಲಿ ಇಲ್ಲಿನ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿ ಸಂಬಂಧಪಟ್ಟ ಸಮಾಜ ಕಲ್ಯಾಣ ಇಲಾಖೆ ಮತ್ತಿತರ ಅಧಿಕಾರಿಗಳಿಗೆ ಮನವಿ ಕೊಟ್ಟಿದ್ದರೂ ಸರ್ಕಾರ ಇನ್ನೂ ಇತ್ತ ಕಣ್ಣಾಯಿಸದಿರುವುದು ಖಂಡನೀಯ. —

ದಲಿತ ಶಿಕ್ಷಕಿಗೆ ಕಿರುಕುಳ

[ನಮ್ಮ ಸಂಚಾರಿ ಪ್ರತಿನಿಧಿಯಿಂದ]

ಮಂಡ್ಯ ಜಿಲ್ಲೆಯ ಅರಕೆರೆ ಹೋಬಳಿಯ ಹುಂಜನಕೆರೆ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ಶಿಕ್ಷಕಿಯಾಗಿರುವ ದಲಿತ ಮಹಿಳೆ ಶ್ರೀಮತಿ ನಾಗರತ್ನಮ್ಮ ಎಂಬಾಕೆಗೆ ಬೋರ್‌ವೆಲ್ ಕೊಳಾಯಿಯಿಂದ ನೀರು ತೆಗೆದುಕೊಳ್ಳದಂತೆ ಅಡ್ಡಿಪಡಿಸುವುದು ಮತ್ತಿತರ ರೀತಿಯಲ್ಲಿ ಆ ಗ್ರಾಮದ ಶೋಷಕ ಸವರ್ಣೀಯರು ದಿನನಿತ್ಯ ಕಿರುಕುಳ ಕೊಡುತ್ತಿದ್ದಾರೆ.

ಅಷ್ಟೇ ಅಲ್ಲದೆ ಶಾಲೆಯ ಹತ್ತಿರವೂ ಬಂದು ಆಕೆ ಬೋಧನೆಯಲ್ಲಿ ತೊಡಗಿದ್ದಾಗಲೂ ಜಾತಿ ಬಗ್ಗೆ ಅವಾಚ್ಯವಾಗಿ ಬೈಯುವುದು ಮತ್ತಿತರ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ.

ಕೂಲಿಗಾರ ಮಹಿಳೆ ಮೇಲೆ ಅಮಾನುಷ ಅತ್ಯಾಚಾರ

ವರದಿ : ಮಹದೇವಯ್ಯ

ಕೂಲಿ ಮುಗಿಸಿ ಸಂಜೆ ತನ್ನ ಮನೆಗೆ ಹಿಂತಿರುಗುತ್ತಿದ್ದ ವಿವಾಹಿತ ದಲಿತ ಮಹಿಳೆಯೊಬ್ಬಳ ಮೇಲೆ ಕ್ರೂರ ಒಕ್ಕಲಿಗನೊಬ್ಬ ಅಮಾನುಷ ಅತ್ಯಾಚಾರ ಎಸಗಿದ ದುರ್ಘಟನೆ ವರದಿಯಾಗಿದೆ.

ಮಳವಳ್ಳಿ ತಾಲ್ಲೋಕು ಆಗಸನಪುರದ ಆಕೆಯು ಇತ್ತೀಚೆಗೆ ತನ್ನ ಹತ್ತು ವರ್ಷದ ಮಗನೊಬ್ಬನ ಜೊತೆ ಪಕ್ಕದ ವಂದಲಗೆರೆ ಗ್ರಾಮದಲ್ಲಿ ಕೂಲಿ ಮುಗಿಸಿ ವಾಪಸ್ಸಾಗುತ್ತಿದ್ದಳು. ನಡುದಾರಿಯಲ್ಲಿ ಕಾದಿದ್ದ ವಂದಲಗೆರೆಯ ಪಟೇಲ ಮೋಟೆಗೌಡನ ಮಗ ಕಯ್ಯ ಉ॥ಚಿಕ್ಕವನು ಎಂಬಾತ ಹತ್ತಿರದ ಹಿಪ್ಪನೇರಳೆ ತೋಟಕ್ಕೆ ಆಕೆಯನ್ನು ಬಲಾತ್ಕಾರವಾಗಿ ಧರಧರನೆ ಎಳೆದುಕೊಂಡು ಹೋಗಿ ಅತ್ಯಾಚಾರ ಎಸಗಿದನೆಂದು ಹೇಳಲಾಗಿದೆ.

ಅತ್ಯಾಚಾರದ ಬಲೆಯಿಂದ ಬಿಡಿಸಿಕೊಳ್ಳಲು ಎಷ್ಟೇ ಪ್ರತಿಭಟಿಸಿ ವಿಫಲಗೊಳ್ಳುತ್ತಿದ್ದ ತಾಯಿಯ ಅಸಹಾಯಕ ಸ್ಥಿತಿ ಕಂಡು ಬಾಯಿ ಬಡಿದುಕೊಂಡು ಸಹಾಯಕ್ಕೆ ಕಿರುಚಿಕೊಳ್ಳುತ್ತಿದ್ದ ಆಕೆಯ ಮಗನನ್ನೂ ಸಹ ಕಯ್ಯನು ಹಿಪ್ಪನೇರಳೇ ಚಬ್ಬೆಯಿಂದ ಬೊಬ್ಬೆ ಬರುವ ಹಾಗೆ ಹೊಡೆದು ದೂರದೂಡಿದನೆಂದು ಗೊತ್ತಾಗಿದೆ.

ತನ್ನ ಅಮಾನುಷ ಕೃತ್ಯ ಮುಗಿಸಿದ ನಂತರ ಆತ "ಈ ವಿಷಯವನ್ನು ಬಹಿರಂಗಪಡಿಸಿದರೆ ನಿನ್ನನೂ ನಿನ್ನ ಮಗನನ್ನು ಸೀಮೆಎಣ್ಣೆ ಸುರಿದು ಸುಟ್ಟುಬಿಡ್ತೀನಿ" ಎಂದು ಆಕೆಗೆ ಬೆದರಿಕೆ ಹಾಕಿದ್ದಾನೆ.

ಈ ಸಬಂಧದಲ್ಲಿ ನತದೃಷ್ಟೆ ಮಹಿಳೆಯು ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಈವರೆಗೆ ಅಪರಾಧಿಯ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. —

ಯುವತಿಯರ ಮಾರಾಟ

ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹರಿಜನ–ಗಿರಿಜನರ ಯುವತಿಯರ ವ್ಯಾಪಾರ ನಡೆಯುತ್ತಿದೆ. ಒಬ್ಬರ ಬೆಲೆ ಎರಡು ಸಾವಿರದಿಂದ ಮೂರು ಸಾವಿರ. ಈ ಯುವತಿಯರನ್ನು ಕೊಂಡುಕೊಂಡು ವೇಶ್ಯಾವಾಟಿಕೆಗಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಗೊತ್ತಾಗಿದೆ. —

Statement about ownership and other particulars about Newspaper PANCHAMA, to be published in the first issue every year after the last day of February.

FORM IV

1.	Title of Newspaper	PANCHAMA
2.	Registration Number of the Newspaper	R. N. 29681/76
3.	Language/Languages in which it is published	Kannada
4.	Periodicity of its publication and the day/days/dates on which it is published	Fortnightly
5.	Retail price of the Newspaper	20 paise
6.	Publishers' Name	Sri. H. Govindaiah
	Nationality	Indian
	Address	5-A, Vani Institute of Commerce. Journalist Colony BANGALORE-560 002.
7.	Printers' Name	D. S. Chakrapani
	Nationality	Indian
	Address	Nutan Printing, Publishing & Training Centre, 405, Sampige Road, Malleswaram, BANGALORE-560 003.
8.	Editor's Name	Sri Ramadev Rake
	Nationality	Indian
	Address	5-A, Vani Institute of Commerce Journalist, Colony, BANGALORE-560 002.
9.	True and precise account of the premises where the Printing is conducted	Nutan Printing, Publishing, & Training Centre 405, Sampige Road, Malleswaram, BANGALORE-560 003.
10.	Owner's Names	1) H. Govindaiah 2) Ramadeva Rake 3) Shivaji Ganeshan 4) Shivamalla Devanur 5) Indudhara Honnapura
10.	Place of Publication	BANGALORE-560 002

1, H. GOVINDAIAH, here by declare that the particulars given above are true to the best of my knowledge and belief.

Bangalore
5-3-79

H. GOVINDAIAH
Signature of Publisher

.....ಮಹಿಳೆ ಕೊಲೆ

[ಮೊದಲನೇ ಪುಟದಿಂದ]

ಬಾವಿಯಲ್ಲಿ ಶವ ಪತೆ

ಅಂತೆಯೇ ತಾ॥ 19-2-79ರಂದು ಹತ್ತಿರದ ತಿಪ್ಪೇನಹಳ್ಳಿಯ ಕುಂಬಾರರ ನರಸಿಂಹಯ್ಯನ ಬಾವಿಯಲ್ಲಿ ಆಕೆಯ ಹೆಣ ತೇಲುತ್ತಿದ್ದು ತಿಳಿದುಬಂತು. ದೂರಿನ ಮೇರೆಗೆ ಪೋಲೀಸರು ಸ್ಥಳಕ್ಕೆ ಧಾವಿಸಿ ಹೆಣ ಹೊರಕ್ಕೆ ತೆಗೆಸಿ ಮಹಜರ್ ನಡೆಸಿದರು.

ಬಾವಿಯಿಂದ ಹೊರತೆಗೆದಾಗ ಹೆಣದ ಮುಖ ಜಜ್ಜಿ ಹೋಗಿತ್ತಲ್ಲದೆ ಬಾಯಿಗೆ ಬಟ್ಟೆ ತುರುಕಿದ್ದುದು ತಿಳಿದು ಬಂದಿದೆ.

ನರಸಮ್ಮನ ಕೊಲೆಯನ್ನು ಚೀರ್ಮನ್ನನ ಮಗ ಬೈರಪ್ಪ ಎಂಬುವವನೇ ನಡೆಸಿದ್ದಾನೆಂದು ಮೃತಳ ತಾತ ಪೋಲೀಸರಿಗೆ ದೂರು ನೀಡಿದ್ದಾನೆ. ದೂರಿನ ಮೇಲೆ ಆರೋಪಿ ಬೈರಪ್ಪನನ್ನು ಪೋಲೀಸರು ಬಂಧಿಸಿ ಅಂದೇ ಬಿಡುಗಡೆ ಮಾಡಿದ್ದಾರೆ. ಈ ಭೀಕರ ಕೊಲೆ ಘಟನೆಯನ್ನು ಮುಚ್ಚಿ ಹಾಕಲು ಎಲ್ಲಾಮಟ್ಟದಲ್ಲೂ ಅನೇಕ ಬಗೆಯ ಪ್ರಯತ್ನಗಳು ನಡೆಯುತ್ತಿವೆ ಎನ್ನಲಾಗಿದೆ.

ಸಂಘರ್ಷ ಸಮಿತಿಯ ಒತ್ತಾಯ

ಈ ಕೊಲೆ ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಸಿ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಬೇಕೆಂದು ದಲಿತರಿಗೆ ಸರಿಯಾದ ರಕ್ಷಣೆ ಅಗತ್ಯವೆಂದು ದಲಿತ ಸಂಘರ್ಷ ಸಮಿತಿಯ ಕೋಲಾರ ಜಿಲ್ಲೆಯ ಅನೇಕ ಘಟಕಗಳು ಒತ್ತಾಯ ಪಡಿಸಿವೆ.

........ಬಂಡಾಯ ಸಮ್ಮೇಳನ

[ಮೊದಲನೇ ಪುಟದಿಂದ]

ಸೈದ್ಧಾಂತಿಕ ಹೋರಾಟಕ್ಕೆ ಸಂಬಂಧಪಟ್ಟಂತೆ ದಲಿತ ಲೇಖಕರು ಉಳಿದ ಪ್ರಗತಿಪರ ಲೇಖಕರ ಜೊತೆ ಒಂದಾಗಬೇಕು. ಏಕೆಂದರೆ ಇವರಿಬ್ಬರಿಗೂ ಇರುವ ಶತ್ರುಗಳ ಗುಂಪು ಒಂದೆ. ಭೂ ಮಾಲೀಕರ, ಹಿಂದೂ ಧರ್ಮದ, ಬಂಡವಾಳಗಾರರ ಮೌಲ್ಯಗಳ ವಿರುದ್ಧ ಇವರಿಬ್ಬರೂ ಒಟ್ಟಾಗಿ ಹೋರಾಡಬೇಕಾಗಿದೆ. ಸಂಸ್ಕೃತಿಯ ಹೆಸರಿನಲ್ಲಿ ಈ ಜನ ಹೇಳುವ ಸುಳ್ಳನ್ನ ಮಾಡುವ ಮೋಸವನ್ನ ಒಟ್ಟಾಗಿ ಬಯಲಿಗೆಳೆಯಬೇಕಾಗಿದೆ.

ಆಗ ಮಾತ್ರ ಈ ನೆಲದ ಎದೆ ನಡುಗುತ್ತದೆ. ಹೊಸ ಮಾನವೀಯ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3. ಇಲ್ಲಿ ಮುದ್ರಿಸಲ್ಪಟ್ಟು ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು.
ವಿಳಾಸ: 5-ಎ, ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ, ಬೆಂಗಳೂರು-560 002